| | |
|---|---|
| Test Paper : **I** | Test Booklet Serial No. : ____________ |
| Test Subject : **GENERAL PAPER** | OMR Sheet No. : ____________ |
| Test Subject Code : **K-0017** | Roll No. ____________ |
| Test booklet Code : **Y** | (Figures as per admission card) |

**Name & Signature of Invigilator/s**

Signature : ______________________________

Name : ______________________________

**Paper : I**

**Subject : GENERAL PAPER**

Time : 1 Hour 15 Minutes — Maximum Marks : 100

Number of Pages in this Booklet : **24** — Number of Questions in this Booklet : **60**

## ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು (60) ಅರುವತ್ತು ಬಹು ಆಯ್ಕೆ ವಿಧದ ಪ್ರಶ್ನೆಗಳನ್ನೊಳಗೊಂಡಿದೆ. ಇವುಗಳಲ್ಲಿನ ಯಾವುದಾದರೂ 50 (ಐವತ್ತು) ಪ್ರಶ್ನೆಗಳನ್ನು ಅಭ್ಯರ್ಥಿಯು ಉತ್ತರಿಸಬೇಕಾಗಿದೆ. ಅಭ್ಯರ್ಥಿಯು 50 ಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಉತ್ತರಿಸಿದ ಪಕ್ಷದಲ್ಲಿ, ಅಭ್ಯರ್ಥಿಯು ಉತ್ತರಿಸಿದ ಮೊದಲ ಐವತ್ತು ಪ್ರಶ್ನೆಗಳನ್ನು ಮಾತ್ರ ಮೌಲ್ಯಮಾಪನ ಮಾಡಲಾಗುತ್ತದೆ.
3. ಪರೀಕ್ಷೆ ಪ್ರಾರಂಭವಾದಾಗ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ **ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ**.
   i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪುಸ್ತಿಕೆಯನ್ನು ಬದಲಾಯಿಸಲಾಗುವುದಿಲ್ಲ , ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು, ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ, ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   ಉದಾಹರಣೆ : (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ. ಪ್ರಶ್ನೆಪುಸ್ತಿಕೆ ಒಂದರಲ್ಲಿ ಕೊಟ್ಟಿರುವ ಪುಸ್ತಿಕೆ ಸಂಕೇತವನ್ನು OMR ಹಾಳೆಯಲ್ಲಿ **ಕಡ್ಡಾಯವಾಗಿ** ನಮೂದಿಸಬೇಕು.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು .
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು , ಸಂಗತವಾದ ಸ್ಥಳ ಹೊರತು ಪಡಿಸಿ, ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ .**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

## Instructions for the Candidates

1. Write your roll number in the space provided on the top of this page.
2. This paper consists of sixty(60) multiple-choice type of questions, out of which the candidate would be required to answer any fifty (50) questions. In the event of the candidate attempting more than fifty questions only, the first fifty questions attempted by the candidate would be evaluated.
3. At the commencement of examination, the question booklet will be given to you. In the first 5 minutes, you are requested **to open the booklet and compulsorily examine it as below** :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside this Booklet, which is common for both Paper I and Paper II**. If you mark at any place other than in the circles, the OMR Sheet will not be evaluated.
6. Read the instructions given in OMR carefully. Fill the Test Booklet Code of Paper – I in OMR Sheet **Compulsorily**.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space provided for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಜನರಲ್ ಪೇಪರ್

## ಪೇಪರ್ – I

**ಗಮನಿಸಿ :** ಈ ಪತ್ರಿಕೆಯು **(60) ಅರುವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ.
ಅಭ್ಯರ್ಥಿಗಳು ಯಾವುದಾದರೂ **(50) ಐವತ್ತು** ಪ್ರಶ್ನೆಗಳನ್ನು ಮಾತ್ರ ಉತ್ತರಿಸಬೇಕು.
ಒಂದು ವೇಳೆ **(50) ಐವತ್ತು** ಪ್ರಶ್ನೆಗಳಿಗಿಂತ ಹೆಚ್ಚಿಗೆ ಪ್ರಶ್ನೆಗಳನ್ನು ಉತ್ತರಿಸಿದಲ್ಲಿ, ಮೊದಲ **(50) ಐವತ್ತು** ಪ್ರಶ್ನೆಗಳಿಗೆ ಮಾತ್ರ ಮೌಲ್ಯಮಾಪನ ಮಾಡಲಾಗುವುದು.

**1.** ಇವುಗಳಲ್ಲಿ ಸಂಶೋಧನಾ ನೀತಿಯು ಒಳಗೊಂಡಿಲ್ಲದಿರುವುದು,

(A) ಪ್ರಾಮಾಣಿಕತೆ

(B) ಸಮಗ್ರತೆ

(C) ವಿಷಯನಿಷ್ಠತೆ

(D) ವಸ್ತುನಿಷ್ಠತೆ

**2.** ನ್ಯೂಟನ್ನನ ಅನ್ವೇಷಣೆಯಾದ ಗುರುತ್ವಾಕರ್ಷಣೆಯ ನಿಯಮವು ಸಂಬಂಧಪಟ್ಟಿರುವುದು,

(A) ಮೂಲಭೂತ ಸಂಶೋಧನೆಗೆ

(B) ಅನ್ವಯಿಕ ಸಂಶೋಧನೆಗೆ

(C) ಕ್ರಿಯಾ ಸಂಶೋಧನೆಗೆ

(D) ಪರಿಮಾಣಾತ್ಮಕ ಸಂಶೋಧನೆಗೆ

**3.** ಸಂಶೋಧಕನು ಪ್ರತಿದರ್ಶದ ಪಟ್ಟಿಯಲ್ಲಿರುವ ಪ್ರತಿ ಹದಿನೈದನೇ ಹೆಸರಿನವರನ್ನು ಸಂದರ್ಶಿಸಲು ತೀರ್ಮಾನಿಸಿದರೆ ಆ ಪ್ರತಿದರ್ಶವು ಇವುಗಳಲ್ಲಿ ಯಾವುದಕ್ಕೆ ಉದಾಹರಣೆಯಾಗುವುದು ?

(A) ವರ್ಗಿಕ ಪ್ರತಿದರ್ಶ

(B) ಕ್ರಮಬದ್ಧ ಪ್ರತಿದರ್ಶ

(C) ಉದ್ದೇಶಿತ ಪ್ರತಿದರ್ಶ

(D) ಅನುಕ್ರಮ ಪ್ರತಿದರ್ಶ

**4.** ಯು. ಜಿ. ಸಿ.ಯು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸುವ ಜರ್ನಲ್‌ಗಳು ಇವುಗಳ ಸಂಬಂಧವನ್ನು ಹೊಂದಿರಬೇಕೆಂದು ಆಗ್ರಹಿಸುತ್ತದೆ.

(A) ಐ.ಎಸ್.ಎಸ್.ಎನ್. ನಿಯತಕಾಲಿಕೆ

(B) ಐ.ಎಸ್.ಬಿ.ಎನ್. ನಿಯತಕಾಲಿಕೆ

(C) ನೋಂದಣಿಯಾದ ನಿಯತಕಾಲಿಕೆ

(D) ಕ್ರಮಬದ್ಧ ನಿಯತಕಾಲಿಕೆ

**5.** ಸಂಶೋಧನೆಯಲ್ಲಿ ಬಾಹ್ಯ ಸಿಂಧುತ್ವ ಎನ್ನುವುದು ಯಾವುದಕ್ಕೆ ಸಂಬಂಧಪಟ್ಟಿದೆ ಎಂದರೆ,

(A) ಅಭ್ಯಾಸದ ತೀವ್ರತೆಗೆ

(B) ಕ್ರಮದ ನಿರ್ದಿಷ್ಟತೆಗೆ

(C) ಸಂಶೋಧನೆಯ ವಿಷಯವು ಸಂಶೋಧಕನ ನೈಜ ಜೀವನಕ್ಕೆ ಹೊಂದಿರುವ ಸಂಬಂಧ

(D) ಪಡೆಯುವ ಫಲಿತಾಂಶವನ್ನು ಎಷ್ಟರ ಮಟ್ಟಿಗೆ ಸಾಮಾನ್ಯೀಕರಣಗೊಳಿಸಬಹುದೆಂಬುದು

**6.** ಅವಲಂಬಿತ ಚಲಕದ ಮೇಲೆ ಪ್ರಾಸಂಗಿಕವಾಗಿ ಆಗಬಹುದಾದ ಪರಿಣಾಮವನ್ನು ತನಿಖೆ ಮಾಡುವುದನ್ನು ಹೀಗೆನ್ನುವರು,

(A) ಸರ್ವೇಕ್ಷಣಾ ಸಂಶೋಧನೆ

(B) ಎಕ್ಸ್-ಪೋಸ್ಟ್ ಫ್ಯಾಕ್ಟೊ ಸಂಶೋಧನೆ

(C) ಕ್ರಿಯಾ ಸಂಶೋಧನೆ

(D) ಕ್ಷೇತ್ರ ತನಿಖೆ

# GENERAL PAPER
## Paper – I

**Note :** This paper contains **Sixty (60)** multiple choice questions. **Each** question carrying **two (2)** marks.
Candidate is expected to answer any **Fifty (50)** questions.
In case more than **Fifty (50)** questions are attempted, only the **first Fifty (50)** questions will be evaluated.

**1.** Research ethics does not include

(A) Honesty

(B) Integrity

(C) Subjectivity

(D) Objectivity

**2.** Newton's discovery of the law of gravity belongs to

(A) Fundamental Research

(B) Applied Research

(C) Action Research

(D) Quantitative Research

**3.** While sampling, if a researcher decides to interview every $15^{th}$ name on a list, it is an example of

(A) Quota sampling

(B) Systematic sampling

(C) Deliberate sampling

(D) Sequential sampling

**4.** UGC insists on research papers to be published in Journals with

(A) ISSN Number

(B) ISBN Number

(C) Registration Number

(D) Serial Number

**5.** External validity in research refers to

(A) The rigour of the study

(B) The accuracy of a procedure

(C) The relation of the research problem with the researcher's personal life

(D) The extent of generalizability that the results provide

**6.** When the likely effects of an incident on a dependent variable are investigated, it is known as

(A) Survey Research

(B) Ex-post Facto Research

(C) Action Research

(D) Field investigation

7. 'ಯುನಿವರ್ಸಿಟಿ ನ್ಯೂಸ್' ವಾರಪತ್ರಿಕೆಯನ್ನು ಹೊರತಂದ ಸಂಸ್ಥೆ
   (A) ನ್ಯಾಕ್ (NAAC)
   (B) ಯುಜಿಸಿ
   (C) ಎಐಯು
   (D) ಎಂ.ಎಚ್.ಆರ್.ಡಿ.

8. 'ನ್ಯಾಕ್'(NAAC)ನ ನಿರ್ದೇಶಕರನ್ನು ಹೆಸರಿಸಿ.
   (A) ಪ್ರೊ. ವಿ. ಎಸ್. ಪ್ರಸಾದ್
   (B) ಪ್ರೊ. ಎ. ಎನ್. ರೈ
   (C) ಪ್ರೊ. ಎಚ್. ಎ. ರಂಗನಾಥ್
   (D) ಪ್ರೊ. ಡಿ. ಪಿ. ಸಿಂಗ್

9. ರೂಸಾ (RUSA) ಎಂದರೆ
   (A) ರಾಷ್ಟ್ರೀಯ ಉನ್ನತ ಸಂಸ್ಕೃತಿ ಅಭಿಯಾನ
   (B) ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ
   (C) ರಾಷ್ಟ್ರೀಯ ಉನ್ನತ ಸ್ತ್ರೀ ಅಭಿಯಾನ
   (D) ರಾಷ್ಟ್ರೀಯ ಉಚ್ಚ ಸಾಹಿತ್ಯ ಅಭಿಯಾನ

10. ಸಂವಿಧಾನ ರಚನಾ ಸಭೆಯಲ್ಲಿ ಭಾರತೀಯ ಸಂವಿಧಾನಕ್ಕೆ ಒಪ್ಪಿಗೆ ದೊರೆತ ದಿನ
   (A) 26 ಜನವರಿ 1956
   (B) 26 ನವೆಂಬರ್ 1949
   (C) 26 ಜನವರಿ 1950
   (D) 26 ನವೆಂಬರ್ 1956

11. ಭಾರತದಲ್ಲಿ ಉನ್ನತ ಶಿಕ್ಷಣವು ಯಾರ ಜವಾಬ್ದಾರಿ ?
   (A) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು
   (B) ರಾಜ್ಯ ಸರ್ಕಾರ
   (C) ಕೇಂದ್ರ ಸರ್ಕಾರ
   (D) ಖಾಸಗಿ ವಿ.ವಿ.ಗಳು

12. ಎನ್.ಸಿ.ಆರ್.ಐ. (NCRI) ಸಂಸ್ಥೆಯ ಕೇಂದ್ರ ಕಛೇರಿ ಎಲ್ಲಿದೆ ?
   (A) ಬೆಂಗಳೂರು
   (B) ಮುಂಬೈ
   (C) ಹೈದರಾಬಾದ್
   (D) ಕೊಲ್ಕತ್ತಾ

13. ಪಿಡಿಎಫ್ (PDF) ಸಂಕ್ಷೇಪಣವು
   (A) ಪೋರ್ಟೇಬಲ್ ಡೈರೆಕ್ಟರಿ ಫೈಲ್ (ಒಯ್ಯಬಹುದಾದ ಕೋಶ ಫೈಲ್)
   (B) ಪೋರ್ಟೇಬಲ್ ಡಾಕ್ಯುಮೆಂಟ್ ಫೈಲ್ (ಒಯ್ಯಬಹುದಾದ ಡಾಕ್ಯುಮೆಂಟ್ ಫೈಲ್)
   (C) ಪೋರ್ಟೇಬಲ್ ಡಿಲೀಟೆಡ್ ಫೈಲ್ (ಒಯ್ಯಬಹುದಾದ ಅಳಿಸಲಾದ ಫೈಲ್)
   (D) ಪೋರ್ಟೇಬಲ್ ಡೊಮೈನ್ ಫೈಲ್ (ಒಯ್ಯಬಹುದಾದ ಡೊಮೈನ್ ಫೈಲ್)

14. 4 GB ಇದಕ್ಕೆ ಸಮಾನವಾಗಿರುತ್ತದೆ
   (A) $2^{32}$ ಮೆಗಾಬೈಟ್ಸ್ (Megabytes)
   (B) $2^{30}$ ಬೈಟ್ಸ್ (Bytes)
   (C) $2^{32}$ ಬೈಟ್ಸ್ (Bytes)
   (D) $2^{10}$ ಟೆರಾಬೈಟ್ಸ್ (Terabytes)

15. VOIP ಎಂದರೆ
   (A) ವಾಯ್ಸ್ ಓವರ್ ಇಂಟರ್ನೆಟ್ ಪ್ರೊಟೋಕಾಲ್ (ಇಂಟರ್‌ನೆಟ್‌ನಲ್ಲಿ ಧ್ವನಿಯನ್ನು ವಿನಿಮಯ ಮಾಡುವ ಪ್ರೋಟೊಕಾಲ್)
   (B) ವಾಯ್ಸ್ ಆನ್ ಇಟ್ರಾನೆಟ್ ಪ್ರೊಸೀಜರ್ (ಇಂಟ್ರಾನೆಟ್‌ನಲ್ಲಿ ಧ್ವನಿಯ ವಿಧಾನ)
   (C) ವಾಯ್ಡ್ ಆಫರ್ ಇಂಟರ್ನೆಟ್ ಪ್ರೊಸೀಜರ್ (ರದ್ದಾದ ಪ್ರಸ್ತಾಪ ಇಂಟರ್‌ನೆಟ್ ವಿಧಾನ)
   (D) ವ್ಯಾಲಿಡ್ ಆಫರ್ ಇನ್ ಪ್ರೋಗ್ರಾಮ್ಸ್ (ಮಾನ್ಯ ಪ್ರಸ್ತಾಪವು ಕಾರ್ಯಕ್ರಮಗಳಲ್ಲಿ)

**7.** 'University News' is a weekly journal brought out by

(A) NAAC

(B) UGC

(C) AIU

(D) MHRD

**8.** Name the Director of NAAC

(A) Prof. V. S. Prasad

(B) Prof. A. N. Rai

(C) Prof. H. A. Ranganath

(D) Prof. D. P. Singh

**9.** Expand RUSA.

(A) Rastriya Unnata Samskriti Abhiyan

(B) Rastriya Uchchtar Shikshan Abhiyan

(C) Rastriya Unnata Stree Abhiyan

(D) Rastriya Uchcha Sahitya Abhiyan

**10.** The Constitution of India was adopted by the Constituent Assembly on

(A) $26^{th}$ January 1956

(B) $26^{th}$ November 1949

(C) $26^{th}$ January 1950

(D) $26^{th}$ November 1956

**11.** Higher education in India is the responsibility of

(A) State and Central Governments

(B) State Government

(C) Central Government

(D) Private Universities

**12.** The Headquarters of NCRI is in

(A) Bengaluru

(B) Mumbai

(C) Hyderabad

(D) Kolkata

**13.** PDF is an abbreviation for

(A) Portable Directory File

(B) Portable Document File

(C) Portable Deleted File

(D) Portable Domain File

**14.** 4 GB is equal to

(A) $2^{32}$ Megabytes

(B) $2^{30}$ Bytes

(C) $2^{32}$ Bytes

(D) $2^{10}$ Terabytes

**15.** VOIP means

(A) Voice Over Internet Protocol

(B) Voice On Intranet Procedure

(C) Void Offer Internet Procedure

(D) Valid Offer in Programmes

16. DNS ಎಂದರೆ
   (A) ಡೀಬಗ್ ನಂಬರ್ ಸಿಸ್ಟಮ್ (ಡೀಬಗ್ ಸಂಖ್ಯಾ ವ್ಯವಸ್ಥೆ)
   (B) ಡೊಮೈನ್ ನ್ಯಾಚುರಲ್ ಸಿಸ್ಟಮ್ (ಡೊಮೈನ್ ನೈಸರ್ಗಿಕ ವ್ಯವಸ್ಥೆ)
   (C) ಡೀಬಗ್ಗಿಂಗ್ ನೇಮ್ ಸಿಸ್ಟಮ್ (ಡೀಬಗ್ ಹೆಸರು ವ್ಯವಸ್ಥೆ)
   (D) ಡೋಮೈನ್ ನೇಮ್ ಸಿಸ್ಟಮ್ (ಡೊಮೈನ್ ಹೆಸರು ವ್ಯವಸ್ಥೆ)

17. ಈ ಕೆಳಗಿನವುಗಳಲ್ಲಿ ಯಾವುದು ಸರಿ ?
   (A) $(16)_{10} = (18)_{16}$
   (B) $(10)_{10} = (10)_{8}$
   (C) $(20)_{10} = (10100)_{2}$
   (D) $(20)_{10} = (10110)_{2}$

18. ಫೈರ್‌ವಾಲ್ ಎಂದರೆ
   (A) ಗಣಕಯಂತ್ರ ಮತ್ತು ಇಂಟರ್ನೆಟ್ ನಡುವೆ ಇರುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಮ್ ಅಥವಾ ತಂತ್ರಾಂಶ
   (B) ಪ್ರಿಂಟರ್ ಮತ್ತು ಮೆಮೊರಿ ಚಿಪ್ ನಡುವೆ ಇರುವ ಒಂದು ಸಾಫ್ಟ್‌ವೇರ್ ಪ್ರೋಗ್ರಾಮ್
   (C) ಗೋಡೆಯ ಮೇಲೆ ಬೆಂಕಿಯನ್ನು ರಚಿಸುವುದು
   (D) ವೈರಸ್

**ಕೆಳಗಿನ ವಾಕ್ಯವೃಂದವನ್ನು ಎಚ್ಚರಿಕೆಯಿಂದ ಓದಿ 19 ರಿಂದ 24ರ ವರೆಗಿನ ಪ್ರಶ್ನೆಗಳನ್ನು ಉತ್ತರಿಸಿ :**

ರಾತ್ರಿ ಹೊರಹೋಗಿ , ಮಿ. ಪಾಂಟೆಲಿಯರ್ ಹಿಂದಿರುಗಿದಾಗ ಹನ್ನೊಂದು ಗಂಟೆಯಾಗಿತ್ತು. ಅವರು ಹಾಸ್ಯ ಮನಸ್ಥಿತಿಯಲ್ಲಿದ್ದರು, ಬಹಳ ಉತ್ಸಾಹದಿಂದ ಹೆಚ್ಚು ಮಾತನಾಡುತ್ತಿದ್ದರು. ಅವರು ಮನೆಯನ್ನು ಪ್ರವೇಶಿಸಿದಾಗ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿದ್ದ ಅವರ ಪತ್ನಿಗೆ ಎಚ್ಚರವಾಯಿತು. ಅವರು ತಮ್ಮ ಬಟ್ಟೆಯನ್ನು ಬದಲಿಸುತ್ತಾ ಹೆಂಡತಿಗೆ ಆದಿನ ನಡೆದ ವಿದ್ಯಮಾನಗಳನ್ನು, ಕೆಲವು ಘಟನೆಗಳನ್ನು ಹೇಳುತ್ತಿದ್ದರು. ಆದರೆ ಅವರ ಹೆಂಡತಿ ನಿದ್ರೆಯಲ್ಲಿ ಮುಳುಗಿದ್ದು ಅವರ ಮಾತಿಗೆ ಸುಮ್ಮನೆ ಹೂಗುಟ್ಟುತ್ತಿ ದ್ದರು. ಅವರಿಗೆ ಹೆಂಡತಿಯು ತಮ್ಮ ಮಾತಿಗೆ ಮಹತ್ವ ಕೊಡದಿರುವುದು ನಿರುತ್ಸಾಹವನ್ನು ಮೂಡಿಸಿತು. ಮಿ. ಪಾಂಟೆಲಿಯರ್‌ರು ಮಕ್ಕಳಿಗೆ ಸಕ್ಕರೆ ಮಿಠಾಯಿ ಮತ್ತು ಕಡಲೆ ಕಾಯಿ ತರುವುದನ್ನು ಮರೆತಿದ್ದರು. ಆದರೂ ಅವರಿಗೆ ಮಕ್ಕಳ ಮೇಲಿನ ಪ್ರೀತಿ ಅಪಾರವಾಗಿತ್ತು. ಅವರು ಮಲಗಿದ್ದ ಕೋಣೆಗೆ ಹೋಗಿ ಅವರು ಆರಾಮವಾಗಿ ಮಲಗಿರುವುದನ್ನು ನೋಡಿ ಬಂದರು.

ಮಿ. ಪಾಂಟೆಲಿಯರ್‌ರು ಹಿಂದಿರುಗಿ ಬಂದು ಹೆಂಡತಿಗೆ ರಾವುಲ್ಲನಿಗೆ ಜ್ವರ ಏರಿದೆಯೆಂದೂ ಅವನನ್ನು ನೋಡಿಕೊಳ್ಳಬೇಕೆಂದೂ ಹೇಳಿದರು. ನಂತರ ಒಂದು ಸಿಗಾರನ್ನು ಹಚ್ಚಿಕೊಂಡು ತೆರೆದ ಬಾಗಿಲಿನ ಬಳಿ ಸೇದುತ್ತಾ ಕುಳಿತರು.

ಮಿಸೆಸ್ ಪಾಂಟೆಲಿಯರ್‌ರಿಗೆ ರಾವುಲ್ಲನಿಗೆ ಯಾವುದೇ ಜ್ವರ ಇಲ್ಲ ಎಂಬುದು ನಿರ್ದಿಷ್ಟವಾಗಿ ಗೊತ್ತಿತ್ತು. ಅವನು ಆರೋಗ್ಯವಾಗಿದ್ದು, ಮಲಗಿದ್ದ ಅವರು ಅವನಿಗೆ ಏನೂ ಆಗಿಲ್ಲ, ದಿನವೆಲ್ಲ ಚೆನ್ನಾಗಿದ್ದನೆಂದು ಹೇಳಿದರು. ಆದರೆ ಅವರ ಪತಿ ಅವನಿಗೆ ಸುಡುವಷ್ಟು ಜ್ವರ ಈಗ ಇದೆ ಎಂದು ಹೇಳಿದರು. ಅವರು ಪತ್ನಿಯ ನಿರ್ಲಕ್ಷಕ್ಕೆ ಬಯ್ದರು. ತಾಯಿಯೇ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ, ಭೂಮಿಯ ಮೇಲೆ ಇನ್ಯಾರು ನೋಡಿಕೊಳ್ಳುವವರು ? ಅವರಿಗೆ ಅವರದೇ ಆದ ದಳ್ಳಾಳಿ ವ್ಯಾಪಾರ ಕೈತುಂಬ ಇದೆ. ಅವರು ಒಂದೇ ಸಮಯದಲ್ಲಿ ಎರಡು ಕೆಲಸವನ್ನು ನಿಭಾಯಿಸಲು ಸಾಧ್ಯವಿಲ್ಲ. ಅವರು ಒಂದೇ ರಾಗದಲ್ಲಿ, ಒತ್ತಿಹೇಳುತ್ತಾ ಇದ್ದರು.

ಮಿಸೆಸ್ ಪಾಂಟೆಲಿಯರ್ ತಮ್ಮ ಹಾಸಿಗೆಯಿಂದೆದ್ದು ಪಕ್ಕದ ಕೊಠಡಿಗೆ ಹೋದರು. ಹಿಂದಿರುಗಿ ಬಂದು ತಮ್ಮ ಹಾಸಿಗೆಯ ತುದಿಯಲ್ಲಿ ಕುಳಿತು, ದಿಂಬಿಗೆ ತಲೆಯಾನಿಸಿದರು. ಅವರು ಮಾತನಾಡಲಿಲ್ಲ. ಅವರು ಗಂಡನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಪಾಂಟೆಲಿಯರ್‌ರವರು ತಮ್ಮ ಸಿಗಾರ್ ಮುಗಿದ ಮೇಲೆ ತಮ್ಮ ಹಾಸಿಗೆಯಲ್ಲಿ ಹೋಗಿ ಮಲಗಿದರು. ಅರ್ಧ ನಿಮಿಷದಲ್ಲಿ ಅವರು ಗಾಢನಿದ್ರೆಯಲ್ಲಿದ್ದರು.

ಆಗ ಮಿಸೆಸ್. ಪಾಂಟೆಲಿಯರ್ ಚೆನ್ನಾಗಿ ಎಚ್ಚರವಾಗಿದ್ದರು. ಸ್ವಲ್ಪ ಅಳುತ್ತಾ ತಮ್ಮ ಕಣ್ಣೀರನ್ನು ತಮ್ಮ ರಾತ್ರಿ ಉಡುಪಿನ ತೋಳಿನಿಂದ ವರಸಿಕೊಂಡರು. ನಂತರ ಮುಂಭಾಗದಲ್ಲಿ ಆಡುವ ಕುರ್ಚಿಯಲ್ಲಿ ಕುಳಿತು ಸಣ್ಣಗೆ ಆಡಿಸುತ್ತಾ ಇದ್ದರು. ಆಗ ಮಧ್ಯರಾತ್ರಿ ಕಳೆದಿತ್ತು. ಸುತ್ತಲೂ ಕತ್ತಲಾವರಿಸಿತ್ತು. ಅಲ್ಲಿ ಗೂಬೆಯ ಕೂಗಿನ ಶಬ್ದ ಬಿಟ್ಟರೆ ಬೇರೆ ಯಾವ ಶಬ್ದವೂ ಇರಲಿಲ್ಲ. ಎಂದೂ ನಿಲ್ಲದ ಸಮುದ್ರದ ಶಬ್ದವು ರಾತ್ರಿ ನಿದ್ದೆಗೆ ಜೋಗುಳ ಹಾಡುವಂತಿತ್ತು.

**16.** DNS means

(A) Debug Number System

(B) Domain Natural System

(C) Debugging Name System

(D) Domain Name System

**17.** Which one of the following is correct ?

(A) $(16)_{10} = (18)_{16}$

(B) $(10)_{10} = (10)_{8}$

(C) $(20)_{10} = (10100)_{2}$

(D) $(20)_{10} = (10110)_{2}$

**18.** Firewall means

(A) A software program or a piece of hardware between computer and internet connection

(B) A software program between printer and memory chip

(C) A device to create fire on the wall

(D) Virus

**Read the following passage carefully and answer the questions 19 to 24 :**

It was eleven O'clock when Mr. Pontellier returned from his night out. He was in an excellent humour, in high spirits, and very talkative. His entrance awoke his wife, who was in bed and fast asleep. He talked to her while he undressed, telling her anecdotes and bits of news and gossip that he had gathered during the day. She was overcome with sleep, and answered him with little half utterances.

He thought it very discouraging that his wife evinced so little interest in things which concerned him and valued so little his conversation. Mr. Pontellier had forgotten the bonbons and peanuts he had promised the boys. Not withstanding, he loved them very much and went into the adjoining room where they slept to take a look at them and make sure that they were resting comfortably.

Mr. Pontellier returned to his wife with the information that Raoul had a high fever and needed looking after. Then he lit his cigar and went and sat near the open door to smoke.

Mrs. Pontellier was quite sure Raoul had no fever. He had gone to bed perfectly well, she said and nothing had ailed him all day. But he assured her the child was burning with fever at that moment. He reproached his wife with her inattention, her habitual neglect of the children. If it was not a mother's place to look after children, whose on earth was it ? He himself had his hands full with his brokerage business. He could not be in two places at once. He talked in a monotonous, insistent way.

Mrs. Pontellier sprang out of bed and went into the next room. She came back and sat on the edge of the bed, leaving her head down on the pillow. She said nothing and refused to answer her husband. When his cigar was smoked out he went to bed and in half a minute was fast asleep.

Mrs. Pontellier was by that time thoroughly awake. She began to cry a little, and wiped her eyes on the sleeve of her night gown. She went out on the porch where she sat down in the wicker chair and began to rock gently to and fro. It was then past midnight. The collages were all dark. There was no sound except the hooting of an old owl and the everlasting voice of the sea, that broke like a mournful lullaby upon the night.

ಮಿಸೆಸ್ ಪಾಂಟೆಲಿಯರ್‌ರ ಕಣ್ಣಿನಲ್ಲಿ ನೀರು ಹರಿಯುತ್ತಿತ್ತು. ಅವರು ಅಲ್ಲಿ ಹಾಗೇ ಅಳುತ್ತಾ ಕುಳಿತಿದ್ದರು. ಅವರು ತಾವು ಏಕೆ ಅಳುತ್ತಿರುವುದೆಂದು ಹೇಳದಾದರು. ಅವರ ವೈವಾಹಿಕ ಜೀವನದಲ್ಲಿ ಆಗ ನಡೆದ ಅನುಭವವು ಹೊಸದೇನೂ ಆಗಿರಲಿಲ್ಲ.

ಅವರ ಮೇಲೆ ವಿವರಿಸಲಾಗದ ಒಂದು ದಬ್ಬಾಳಿಕೆಯ ಭಾವನೆ ತುಂಬಿಕೊಂಡಿತ್ತು. ಅದೊಂದು ವಿಚಿತ್ರವಾದ, ಅಪರೂಪದ ಮನೋಭಾವನೆಯಾಗಿತ್ತು. ಅವರು ಅಲ್ಲಿ ಕುಳಿತು ಅವರ ಗಂಡನನ್ನು ಅವಹೇಳನ ಮಾಡುತ್ತಿರಲಿಲ್ಲ ಅಥವಾ ಅವರ ವಿಧಿಯನ್ನು ನಿಂದಿಸುತ್ತಲೂ ಇರಲಿಲ್ಲ. ಅವರು ತನ್ನಷ್ಟಕ್ಕೆ ತಾನೇ ಚೆನ್ನಾಗಿ ಅಳುತ್ತಿದ್ದರು. ಅವರು ಅದೇ ಮನೋವೇದನೆಯಿಂದ ಹಾಗೇ ಕುಳಿತಿರುವುದನ್ನು ಸೊಳ್ಳೆಗಳು ತಪ್ಪಿಸಿದುವು.

ಮಾರನೆ ದಿನ ಬೆಳಿಗ್ಗೆ ಮಿ. ಪಾಂಟೆಲಿಯರ್ ಸರಿಯಾದ ಸಮಯಕ್ಕೆ ಎದ್ದು ತನ್ನ ಕೆಲಸದ ಸ್ಥಳಕ್ಕೆ ಹೋಗಲು ಗಾಡಿಯನ್ನೇರಲು ಸಿದ್ಧರಾದರು. ತಮ್ಮ ವ್ಯಾಪಾರಕ್ಕಾಗಿ ಅವರು ಪಟ್ಟಣಕ್ಕೆ ಹೋಗಬೇಕಾಗಿತ್ತು. ಇನ್ನು ಮುಂದಿನ ಶನಿವಾರದವರೆಗೂ ಅವರನ್ನು ಅವರ ಮನೆಯವರು ನೋಡಲು ಸಾಧ್ಯವಿರಲಿಲ್ಲ. ಅವರು ತಮ್ಮ ಹೊಸ ವಾರವನ್ನು ವ್ಯಾಪಾರದಲ್ಲಿ ಕಳೆಯುವ ಸಂತೋಷವನ್ನು ಎದುರು ನೋಡುತ್ತಾ ಹೋಗಲು ಆತುರರಾಗಿದ್ದರು.

**19.** ಸಂಜೆಯ ವೇಳೆ ಮಿ. ಪಾಂಟೆಲಿಯರ್‌ರ ವ್ಯಕ್ತಿತ್ವವನ್ನು ನೀವು ಹೇಗೆ ವರ್ಣಿಸುವಿರಿ ?

(A) ತುಂಬ ಧಾರಾಳಿ

(B) ಒಪ್ಪಿಕೊಳ್ಳಲಾರದಷ್ಟು ತಾಳ್ಮೆ ಕೆಟ್ಟವರು

(C) ಮುಂಗೋಪಿ ಹಾಗೂ ವಿಚಾರಹೀನ

(D) ಉತ್ತೇಜಿತ ಹಾಗೂ ಸ್ವ-ಕೇಂದ್ರೀಕೃತ

**20.** ನಾಲ್ಕನೇ ಪ್ಯಾರಾದ ಕೊನೆ ವಾಕ್ಯದಿಂದ ನೀವು ಮಿ. ಪಾಂಟೆಲಿಯರನ ದೂರು ಏನೆಂದು ಹೇಳುವಿರಿ ?

(A) ಅವನ ದೂರು ಗಲಿಬಿಲಿಗೊಳಿಸುತ್ತದೆ

(B) ಅವನ ದೂರು ಇದ್ದದ್ದೇ ಆದರೆ ಅವರು ಹೇಳುವಷ್ಟು ತುರ್ತಲ್ಲ

(C) ಅವನ ದೂರು ಚುಚ್ಚುವಂತದ್ದು

(D) ಅವನ ದೂರು ವಿವೇಚನೆಯುಳ್ಳದ್ದು ಮತ್ತು ಆಲೋಚಿಸುವಂತದ್ದು

**21.** ಪ್ಯಾರ ಏಳು ಮತ್ತು ಎಂಟರಲ್ಲಿನ ಮಿಸೆಸ್. ಪಾಂಟೆಲಿಯರ್‌ಳ ಉದ್ವೇಗ ಮತ್ತು ಪ್ರತಿಕ್ರಿಯೆಗಳು ಏನು ಹೇಳುತ್ತವೆ ಎಂದರೆ

(A) ತಾನು ಮಕ್ಕಳನ್ನು ನೋಡಿಕೊಳ್ಳುವ ಕೆಲಸ ಪ್ರಶ್ನಾತೀತವಾದದ್ದು

(B) ಅವಳು ಅವಳ ಗಂಡನಷ್ಟು ಪ್ರಾಪಂಚಿಕತೆಯನ್ನು ಹೊಂದಿಲ್ಲ

(C) ಅವಳು ತನ್ನ ಅಸಂತೋಷವನ್ನು ತೋರ್ಪಡಿಸಿಕೊಳ್ಳುತ್ತಿದ್ದಾಳೆ

(D) ರಾತ್ರಿ ವೇಳೆ ಹೊರಗೆ ಕುಳಿತುಕೊಳ್ಳಲು ಬಯಸುತ್ತಾಳೆ

**22.** ಈ ಪಠ್ಯವು ಮಿ. ಪಾಂಟೆಲಿಯರನು ಅತ್ಯಂತ ಸಂತೋಷವಾಗಿರುವುದು ಯಾವಾಗ ಎಂದು ಹೇಳುತ್ತದೆ ಎಂದರೆ

(A) ತನ್ನ ಮಕ್ಕಳೊಂದಿಗಿದ್ದಾಗ

(B) ಸಿಗಾರ್ ಸೇದುವಾಗ

(C) ಹೆಂಡತಿಯನ್ನು ಬೈಯುವಾಗ

(D) ಮನೆಯಿಂದ ಹೊರಗಿದ್ದಾಗ ಅಥವಾ ಹೊರಡುವಾಗ

**23.** ಎಂಟನೇ ಪ್ಯಾರಾದ ಕೊನೆಯ ವಾಕ್ಯದ ಮೂಲಕ ತಿಳಿಸುವ ಆಲೋಚನೆ ಯಾವುದು ?

(A) ಸೊಳ್ಳೆಗಳ ನಾದ ಮಿಸೆಸ್. ಪಾಂಟೆಲಿಯರ್‌ಳನ್ನು ಸಮಾಧಾನಗೊಳಿಸಿತು

(B) ಮಿಸೆಸ್. ಪಾಂಟೆಲಿಯರ್‌ಳು ಒಳಗೆ ಹೋಗಬೇಕಾಯಿತು

(C) ಅವಳು ಅಲ್ಲೇ ಅನೇಕ ಗಂಟೆಗಳ ಕಾಲ ಕುಳಿತಿದ್ದಳು

(D) ಸೊಳ್ಳೆಗಳು ಅವಳಿಗೆ ಒಳ್ಳೆಯ ಮನೋಭಾವ ಮತ್ತು ಪರಿಸರಗಳನ್ನು ಒದಗಿಸಿದ್ದವು

**24.** ಮಿ. ಪಾಂಟೆಲಿಯರನು ತನಗೆ ಮಕ್ಕಳನ್ನು ನೋಡಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಈ ಪಠ್ಯದಲ್ಲಿ ಹೇಗೆ ಪ್ರತಿಪಾದಿಸುತ್ತಾನೆ ?

(A) ಯಾವಾಗಲೂ ತಾನು ಮನೆಗೆ ಬರುವ ವೇಳೆಗಾಗಲೇ ಮಕ್ಕಳು ಮಲಗಿಬಿಟ್ಟಿರುತ್ತಾರೆ

(B) ಮಕ್ಕಳನ್ನು ಅವನು ಕಡೆಗಣಿಸಿದ

(C) ತನ್ನ ವ್ಯಾಪಾರದಲ್ಲೇ ಅವನು ನಿರತನಾಗಿರುತ್ತಿದ್ದ

(D) ಅವರೊಂದಿಗೆ ತುಂಬಾ ಸೇರಿಕೊಂಡಿರುವುದನ್ನು ಅವನು ತಪ್ಪಿಸಿಕೊಳ್ಳುತ್ತಿದ್ದ

The tears came so fast to Mrs. Pontellier's eyes. She went on crying there. She could not have told why she was crying. Such experiences as the foregoing were not uncommon in her married life.

An indescribable sense of oppression filled her whole being. It was strange and unfamiliar; it was a mood. She did not sit there upbraiding her husband or lamenting at fate. She was just having a good cry all to herself. The mosquitoes succeeded in dispelling a mood which would have held her there for long.

The following morning Mr. Pontellier was up in good time to take the carriage which was to convey him to the city. He was returning to the city, to his business. They would not see him again at home till the coming Saturday. He was eager to go, as he looked forward to a lively week in the financial centre.

**19.** How would you describe Mr. Pontellier's conduct during the evening ?

(A) Very generous

(B) Justifiably impatient

(C) Passionate and irrational

(D) Patronizing and self-centred

**20.** From the last sentence of the 4th paragraph, what do you think of Mr. Pontellier's complaints ?

(A) His complaints are confusing

(B) His complaints are familiar and not so urgent as he claims

(C) His complaints are sarcastic

(D) His complaints are rational and thought provoking

**21.** Mrs. Pontellier's emotions and reactions in paragraphs 7 and 8 suggest that

(A) She accepts her role of caring for the children unquestioningly

(B) She is not as worldly as her husband is

(C) She is acknowledging her unhappiness

(D) She loves to sit out at night

**22.** The passage shows Mr. Pontellier as happiest when he

(A) Is with his children

(B) Smokes a cigar

(C) Reproaches his wife

(D) Is away from home or is about to leave home

**23.** What is the idea communicated through the last sentence of the 8th paragraph ?

(A) Mosquitoes' sound comforted Mrs. Pontellier

(B) Mrs. Pontellier was forced to go inside

(C) She sat there for many hours

(D) Mosquitoes provided a good mood and ambience

**24.** What justification is given in the passage for Mr. Pontellier's inability to look after children ?

(A) Children slept off before he came home always

(B) He neglected his children

(C) He is very busy with business

(D) He wanted to avoid getting attached to them too much

**ಈ ಕೆಳಕಂಡ ಮಾಹಿತಿಯನ್ನಾಧರಿಸಿ ಪ್ರಶ್ನೆ ಸಂಖ್ಯೆ 25 ರಿಂದ 30 ರವರೆಗೆ ಉತ್ತರಿಸಿ :**

ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ 800 ವಿದ್ಯಾರ್ಥಿಗಳು ಶೇಕಡಾವಾರಿನಲ್ಲಿ ಐದು ಪಠ್ಯೇತರ ಚಟುವಟಿಕೆಗಳಿಗೆ ಶ್ರೇಯಾಂಕವನ್ನು ತಮ್ಮ ಆದ್ಯತೆಯ ಮೇರೆಗೆ ನೀಡಿದ್ದಾರೆ. ಶ್ರೇಣಿ I ಉಚ್ಚ ಸ್ಥಾನದಲ್ಲಿದೆ.

| ಚಟುವಟಿಕೆ | ಶ್ರೇಯಾಂಕ ನೀಡಿದ ವಿದ್ಯಾರ್ಥಿಗಳ ಶೇಕಡಾವಾರು | | | | |
|---|---|---|---|---|---|
| | I | II | III | IV | V |
| ಚರ್ಚೆ | 14 | 24 | 22 | 23 | 17 |
| ಕ್ರೀಡೆ | 18 | 15 | 25 | 20 | 22 |
| ಕವನ | 22 | 18 | 15 | 21 | 24 |
| ನೃತ್ಯ | 26 | 19 | 18 | 17 | 20 |
| ಹಾಡುವುದು | 20 | 24 | 20 | 19 | 17 |

**ಸೂಚನೆ :** ಶ್ರೇಣಿ I ಕ್ಕೆ 5 ಅಂಕಗಳನ್ನು ನೀಡಲಾಗಿದೆ, ಶ್ರೇಣಿ II ಕ್ಕೆ 4 ಅಂಕಗಳು, ಶ್ರೇಣಿ III ಕ್ಕೆ 3 ಅಂಕಗಳು, ಶ್ರೇಣಿ IV ಕ್ಕೆ 2 ಅಂಕಗಳು, ಶ್ರೇಣಿ V ಕ್ಕೆ 1 ಅಂಕಗಳನ್ನು ನೀಡಲಾಗಿದೆ.

**25.** ಯಾವ ಚಟುವಟಿಕೆ ಅತ್ಯಧಿಕ ಅಂಕಗಳನ್ನು ಪಡೆದಿದೆ ?

(A) ಚರ್ಚೆ

(B) ನೃತ್ಯ

(C) ಕವನ

(D) ಹಾಡುವುದು

**26.** ಎಷ್ಟು ವಿದ್ಯಾರ್ಥಿಗಳು ಕ್ರೀಡೆಗೆ ಶ್ರೇಣಿ IV ನೀಡಿದರು ?

(A) 160

(B) 320

(C) 140

(D) 280

**27.** ಯಾವ ಪಠ್ಯೇತರ ಚಟುವಟಿಕೆ ಕನಿಷ್ಠ ಪ್ರಾಮುಖ್ಯತೆ ಹೊಂದಿದೆ ಎಂದು ಪರಿಗಣಿಸಲಾಗಿದೆ (ಅಂದರೆ ಯಾವ ಚಟುವಟಿಕೆ ಕನಿಷ್ಠ ಅಂಕಗಳನ್ನು ಪಡೆದಿರುವುದು) ?

(A) ಕವನ

(B) ಹಾಡುವುದು

(C) ಕ್ರೀಡೆ

(D) ನೃತ್ಯ

**28.** ಯಾವ ಅನುಪಾತದಲ್ಲಿ ಎಷ್ಟು ವಿದ್ಯಾರ್ಥಿಗಳ ಸಂಖ್ಯೆಯು ಕವನದ ಶ್ರೇಣಿ I, II ಮತ್ತು IV, ಮತ್ತು ಎಷ್ಟು ವಿದ್ಯಾರ್ಥಿಗಳು ಚರ್ಚೆಯ ಶ್ರೇಣಿ III, V ಮತ್ತು I ಕೊಟ್ಟಿರುತ್ತಾರೆ ?

(A) 16 : 17

(B) 3 : 7

(C) 89 : 71

(D) 61 : 53

**29.** ಒಟ್ಟು ವಿದ್ಯಾರ್ಥಿಗಳಲ್ಲಿ ಶ್ರೇಣಿ II ಚರ್ಚೆ ಮತ್ತು ನೃತ್ಯಕ್ಕೆ ಕೊಟ್ಟಿರುವವರು ಮತ್ತು ವಿದ್ಯಾರ್ಥಿಗಳಲ್ಲಿ ಶ್ರೇಣಿ III ನ್ನು ಹಾಡುವುದು ಮತ್ತು ನೃತ್ಯಕ್ಕೆ ಕೊಟ್ಟಿರುವವರ ವ್ಯತ್ಯಾಸವೆಷ್ಟು ?

(A) 40

(B) 20

(C) 30

(D) 10

**30.** ಎಷ್ಟು ವಿದ್ಯಾರ್ಥಿಗಳು ನೃತ್ಯಕ್ಕೆ ಶ್ರೇಣಿ I ನ್ನು ನೀಡಿದರು ?

(A) 186

(B) 208

(C) 228

(D) 238

**Answer Questions 25 – 30 based on the following information :**

Given below is a table showing the percentage of a total of 800 students who gave ranking to five extra curricular activities based on their preference. Rank I is the highest.

| Activity | Percentage of students who gave ranking | | | | |
|---|---|---|---|---|---|
| | I | II | III | IV | V |
| Debating | 14 | 24 | 22 | 23 | 17 |
| Sports | 18 | 15 | 25 | 20 | 22 |
| Poetry | 22 | 18 | 15 | 21 | 24 |
| Dancing | 26 | 19 | 18 | 17 | 20 |
| Singing | 20 | 24 | 20 | 19 | 17 |

**Note** : Rank I is given 5 points, Rank II is given 4 points, Rank III is given 3 points, Rank IV is given 2 points, Rank V is given 1 point.

**25.** Which activity has received the highest number of points ?

(A) Debating

(B) Dancing

(C) Poetry

(D) Singing

**26.** How many students gave rank IV to sports ?

(A) 160

(B) 320

(C) 140

(D) 280

**27.** Which extra curricular activity is considered the least important (i.e. the activity which received the least number of points) ?

(A) Poetry

(B) Singing

(C) Sports

(D) Dancing

**28.** What is the ratio of the number of students who gave poetry a rank of I, II and IV to the number of students who gave debating a rank of III, V and I ?

(A) 16 : 17

(B) 3 : 7

(C) 89 : 71

(D) 61 : 53

**29.** What is the difference between the number of students who gave rank II to debating plus dancing and the students who gave rank III to singing plus dancing ?

(A) 40

(B) 20

(C) 30

(D) 10

**30.** How many students gave rank I to dancing ?

(A) 186

(B) 208

(C) 228

(D) 238

**(ಅಂಧ ವಿದ್ಯಾರ್ಥಿಗಳಿಗೆ ಮಾತ್ರ)**

ಈ ಕೆಳಗಿನ ಪಠ್ಯವನ್ನು ಎಚ್ಚರಿಕೆಯಿಂದ ಓದಿಕೊಂಡು, ಕೊಟ್ಟಿರುವ **25** ರಿಂದ **30** ರವರೆಗಿನ ಪ್ರಶ್ನೆಗಳನ್ನು ಉತ್ತರಿಸಿ :

ಇತಿಹಾಸದ ಅಧ್ಯಯನದಿಂದ ಅನೇಕ ಲಾಭಗಳಿವೆ. ಮೊದಲನೆಯದಾಗಿ ಭೂತಕಾಲದ ಘಟನೆಗಳಿಂದ ಅನೇಕ ವಿಚಾರಗಳನ್ನು ತಿಳಿದುಕೊಳ್ಳಬಹುದು. ನಾವು ತಪ್ಪುಗಳನ್ನು ಪುನರಾವರ್ತಿಸಬಹುದು ಆದರೆ ಕೊನೆಯ ಪಕ್ಷ ಅವುಗಳನ್ನು ಕಡೆಗಣಿಸುವ ಅವಕಾಶಗಳು ನಮಗಿವೆ – ಎರಡನೆಯದಾಗಿ ಇತಿಹಾಸವು ನಮಗೆ ವರ್ತಮಾನದ ಬಗ್ಗೆ ಯಾವ ಪ್ರಶ್ನೆಯನ್ನು ಕೇಳಬೇಕೆಂಬುದನ್ನು ತಿಳಿಸುತ್ತದೆ. ಹಲವು ಜನರ ದೃಷ್ಟಿಕೋನದಂತೆ, ಇತಿಹಾಸದ ಅಭ್ಯಾಸವು ಹೆಸರುಗಳನ್ನು, ತಾರೀಖುಗಳನ್ನು ಮತ್ತು ಸ್ಥಳಗಳನ್ನು ಜ್ಞಾಪಕ ಇಟ್ಟುಕೊಳ್ಳುವುದಲ್ಲ, ಅದು ಮಾನವ ಜೀವನವನ್ನು ರೂಪುಗೊಳಿಸುವುದರಲ್ಲಿ ವಹಿಸಿದ ಪಾತ್ರವೇನು ಎಂದು ಅರಿಯುವುದೇ ಆಗಿದೆ. ಹಿಂದಿನ ಘಟನೆಗಳನ್ನು ನಾವು ಪರೀಕ್ಷಿಸುವ ಮೂಲಕ, ಈಗಿನ ಘಟನೆಗಳ ಪರಿಣಾಮಗಳನ್ನು ನಿರ್ಧರಿಸಬಹುದು. ಇತಿಹಾಸವು ನಮಗೆ ಏನಾಗಬಹುದು ಎಂಬುದನ್ನು ಬೋಧಿಸುತ್ತದೆ.

ಇತಿಹಾಸದ ಅಧ್ಯಯನದ ಮತ್ತೊಂದು ಲಾಭವೆಂದರೆ ಅದು ಒಳಗೊಂಡಿರುವ ವಿಶಾಲವಾದ ಮಾನವನ ಅನುಭವಗಳು. ಯುದ್ಧ ಮತ್ತು ಶಾಂತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳನ್ನಾಗಿ ಅದು ತಿಳಿಸುತ್ತದೆ. ಅಲ್ಲದೆ ಇತಿಹಾಸದ ಅಧ್ಯಯನದಲ್ಲಿ ಸಂಸ್ಕೃತಿಯ ವಿಷಯಗಳೂ ಇರುತ್ತವೆ. (ಕಲೆ, ಸಾಹಿತ್ಯ ಮತ್ತು ಸಂಗೀತ). ಮಾನವನ ರೀತಿ ನೀತಿಗಳು ಚರಿತ್ರೆಯ ಮುಖ್ಯವಾದ ಭಾಗ. ಪ್ರಪಂಚದ ಆಗು ಹೋಗುಗಳನ್ನು ಮಾನವನ ಆಸೆ, ದುರಾಸೆ ಮತ್ತು ಸಂಶಯ ಮುಂತಾದವುಗಳು ನಿರ್ಧರಿಸಿವೆ. ಯಾರು ಇತಿಹಾಸದ ಅಭ್ಯಾಸವು ಬೇಸರವನ್ನುಂಟುಮಾಡುತ್ತದೆ ಎಂದು ಹೇಳುವರೋ ಅವರು ನಿಜವಾಗಿಯೂ ಇತಿಹಾಸವನ್ನು ಅಭ್ಯಾಸಮಾಡಿಲ್ಲವೆನ್ನಬಹುದು.

**25.** ಈ ಪಠ್ಯದ ಮುಖ್ಯ ಆಲೋಚನೆ ಏನು ?

(A) ಇತಿಹಾಸದ ಅಭ್ಯಾಸವು ನಮಗೆ ವರ್ತಮಾನದಲ್ಲಿ ಜೀವಿಸಲು ಸಹಾಯಕ

(B) ಇತಿಹಾಸದ ಅಭ್ಯಾಸ ಕೇವಲ ಜ್ಞಾಪಕ ಇಟ್ಟುಕೊಳ್ಳುವ ಕೆಲಸವಲ್ಲ

(C) ಶಿಕ್ಷಣದ ಪಾತ್ರವೇನು ಎಂಬುದನ್ನು ಇತಿಹಾಸ ಬೋಧಿಸುತ್ತದೆ

(D) ವಿದ್ಯಾರ್ಥಿಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಇತಿಹಾಸಗಳನ್ನು ಅಭ್ಯಾಸಮಾಡಬೇಕು

**26.** ಈ ಪಠ್ಯವನ್ನು ಬರೆದಿರುವವರು ಇತಿಹಾಸದ ಬೋಧನೆಗೆ ಸೂಕ್ತವಾದ ವಿಧಾನ ಯಾವುದೆಂದು ಹೇಳುತ್ತಾರೆ ?

(A) ಕೆಲವು ಗೊತ್ತಾದ ವಿಷಯಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಫ್ಲ್ಯಾಷ್–ಕಾರ್ಡ್‌ಗಳನ್ನು ಬಳಸುವುದು

(B) ದಿನಗಳು ಮತ್ತು ಘಟನೆಗಳ ಮೇಲೆ 'ಕ್ವಿಸ್'

(C) ಈಗಿನ ಸಮಾಜಕ್ಕೆ ಇತಿಹಾಸದ ಘಟನೆಗಳನ್ನು ತಾಳೆಹಾಕುವುದು

(D) ಜ್ಞಾಪಕ ಶಕ್ತಿಯ ಪರೀಕ್ಷಣ

**(For Blind Candidates Only)**

Read the following passage carefully and answer the questions **25** to **30** :

The study of history provides many benefits. First, we learn from the past. We may repeat mistakes, but, at least, we have the opportunity to avoid them. Second, history teaches us what questions to ask about the present. Contrary to some people's view, the study of history is not the memorization of names, dates, and places. It is the thoughtful examination of the forces that have shaped the courses of human life. We can examine events from the past and then draw inferences about current events. History teaches us about likely outcomes.

Another benefit of the study of history is the broad range of human experience which is covered. War and peace are certainly covered as are national and international affairs. However, matters of culture (art, literature and music) are also included in historical study. Human nature is an important part of history : emotions like passion, greed and insecurity have influenced the shaping of world affairs. Anyone who thinks that the study of history is boring has not really studied history.

**25.** What is the main idea of this passage ?

(A) Studying history helps us to live in today's world

(B) Studying history is not just memorization

(C) History teaches us about the role of education

(D) Students should study both national and international history

**26.** Which method of teaching history would the author of the passage support ?

(A) Using flash cards to remember specific facts

(B) 'Quizze's on dates and events

(C) Applying historical events to modern society

(D) Memory tests

**27.** ಈ ಪಠ್ಯದ ಈ ಹೇಳಿಕೆಗಳಲ್ಲಿ ಯಾವುದು ಸರಿಯಾದುದು ?

(A) ಈ ಪಠ್ಯ ರಚನಕಾರರು ಒಬ್ಬ ಇತಿಹಾಸದ ಪ್ರಾಧ್ಯಾಪಕರು

(B) ಮಾನವನ ಅನಿಸಿಕೆಗಳು ಪ್ರಪಂಚದ ಆಗು ಹೋಗುಗಳ ಮೇಲೆ ಪರಿಣಾಮವನ್ನು ಬೀರುತ್ತವೆ

(C) ಇತಿಹಾಸದ ಅಭ್ಯಾಸ ನಿಜವಾಗಿಯೂ ಬೇಸರ ಉಂಟುಮಾಡುತ್ತದೆ

(D) ಇತಿಹಾಸವು ಕೇವಲ ಭೂತಕಾಲದ ಘಟನೆಗಳ ಅಭ್ಯಾಸಕ್ಕೆ ನಮಗೆ ಸಹಾಯಮಾಡುತ್ತದೆ

**28.** ಇವುಗಳಲ್ಲಿ ಯಾವುದೊಂದು ಇತಿಹಾಸದ ಅಭ್ಯಾಸದಿಂದಾಗುವ ಲಾಭ ?

(A) ಅದು ನಮಗೆ ಹೆಸರು, ದಿನಾಂಕ ಮತ್ತು ಸ್ಥಳಗಳನ್ನು ಜ್ಞಾಪಕ ಇಟ್ಟುಕೊಳ್ಳಲು ಸಹಾಯ ಮಾಡುತ್ತದೆ

(B) ಜೀವನದಲ್ಲಿ ಮಾನವನ ಸ್ವಭಾವ ಮುಖ್ಯವಾದದ್ದಾಗುತ್ತದೆ

(C) ಕಳೆದ ಘಟನೆಗಳ ಪರೀಕ್ಷೆಯಿಂದ ನಾವು ಅಂಕಿ–ಅಂಶಗಳನ್ನು ಮತ್ತು ಭೂಪಟವನ್ನು ತಯಾರಿಸುತ್ತೇವೆ

(D) ಅದು ನಮಗೆ ಘಟನೆಗಳಿಂದಾಗುವ ಪರಿಣಾಮವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ

**29.** ಇತಿಹಾಸದಲ್ಲಿ ಪದೇ ಪದೇ ಆಗುವ ತಪ್ಪುಗಳ ಬಗ್ಗೆ ಲೇಖಕನ ಅಭಿವ್ಯಕ್ತಿ ಏನು ?

(A) ಅವನು ಅಂತಹ ತಪ್ಪುಗಳಿಗೆ ಉತ್ತೇಜನ ಕೊಡುತ್ತಾನೆ

(B) ಇತಿಹಾಸದ ಅಭ್ಯಾಸದಿಂದ ಅಂತಹ ತಪ್ಪುಗಳಾಗದಂತೆ ನೋಡಿಕೊಳ್ಳಬಹುದು ಎನ್ನುತ್ತಾನೆ

(C) ಅವನು ಇತಿಹಾಸದ ಅಭ್ಯಾಸದಿಂದ ಅಂತಹ ತಪ್ಪುಗಳು ಮುಂದೆ ಇತಿಹಾಸದಲ್ಲಿ ಬರದಂತೆ ನೋಡಿಕೊಳ್ಳಬಹುದು

(D) ಅವನು ಅಂತಹ ಇತಿಹಾಸದ ತಪ್ಪುಗಳನ್ನೆಸಗುವವರನ್ನು ಶಿಕ್ಷಿಸಲು ಉತ್ತೇಜಿಸುತ್ತಾನೆ

**30.** ಈ ಪಠ್ಯವು ವರ್ತಮಾನವನ್ನು ಹೀಗೆ ಕಾಣುತ್ತದೆ

(A) ಅದು ಭೂತ ಮತ್ತು ಭವಿಷ್ಯದಿಂದ ಸ್ವತಂತ್ರವಾದುದು

(B) ಇತಿಹಾಸದ ಬಲದಿಂದ ರೂಪುಗೊಂಡದ್ದು

(C) ಅದು ಆಸೆ, ದುರಾಸೆ ಮತ್ತು ಸಂಶಯಗಳಿಂದ ತುಂಬಿದೆ

(D) ಅದೊಂದು ತಪ್ಪುಗಳ ಹೊರೆ

**27.** Which of the following statements is true of this passage ?

(A) The author of the passage is a professor of History

(B) Human feelings influence world affairs

(C) Study of history is really boring

(D) History helps us only to learn about past events

**28.** Which of the following is a benefit of the study of history ?

(A) It helps us to memorize names, dates and places

(B) Human nature becomes important in life

(C) By examining past events, we draw figures and maps

(D) It helps us to understand consequences of events

**29.** What is the author's attitude to repeating mistakes found in history ?

(A) He is supportive of repeating mistakes

(B) He rules out the possibility of repeating them through a study of history

(C) He indicates a possibility of keeping away from historical mistakes through a study of history

(D) He supports punishing people who repeat historical mistakes

**30.** The passage sees the present as

(A) Independent of its past and future

(B) Shaped by forces in history

(C) Filled with emotions like passion, greed and insecurity

(D) A bundle of mistakes

**31.** ಒಂದು ಕೆಲಸವನ್ನು 9 ಗಂಡಸರು ಮತ್ತು 12 ಹುಡುಗರು 4 ದಿನಗಳಲ್ಲಿ ಮುಗಿಸಬಲ್ಲರು ಮತ್ತು ಅದೇ ಕೆಲಸವನ್ನು 4 ಗಂಡಸರು ಮತ್ತು 16 ಹುಡುಗರು 6 ದಿನಗಳಲ್ಲಿ ಮಾಡಬಲ್ಲರು. ಹಾಗಾದರೆ ಇದೇ ಕೆಲಸವನ್ನು 6 ಗಂಡಸರು ಮತ್ತು 24 ಹುಡುಗರು ಎಷ್ಟು ದಿನಗಳಲ್ಲಿ ಮುಗಿಸಬಲ್ಲರು ?

(A) 3 ದಿನಗಳು (B) 4 ದಿನಗಳು
(C) 5 ದಿನಗಳು (D) 6 ದಿನಗಳು

**32.** ಈ ಕೆಳಗಿನ ಸರಣಿಯಲ್ಲಿ ಐದನೇ ಸಂಖ್ಯೆಯನ್ನು ಕಂಡುಹಿಡಿಯಿರಿ:

2, 7, 27, 107, ?

(A) 227 (B) 327
(C) 427 (D) 527

**33.** HOUSEನ್ನು ಸಂಕೇತ ಬಳಸಿ INVRF ಎಂದು ಬರೆದರೆ, CROWDನ್ನು ಸಂಕೇತ ಬಳಸಿ ಹೇಗೆ ಬರೆಯಬಹುದು ?

(A) DQPVE (B) DQPVK
(C) DQVPE (D) DQEPV

**34.** 4 ಮತ್ತು 5 ಗಂಟೆಯ ನಡುವೆ ಯಾವ ಸಮಯದಲ್ಲಿ ಒಂದು ಗಡಿಯಾರದ ಮುಳ್ಳುಗಳು ವಿರುದ್ಧ ದಿಕ್ಕಿನಲ್ಲಿ ಇರುತ್ತದೆ ?

(A) 4 ಗಂಟೆ 45 ನಿಮಿಷ
(B) 4 ಗಂಟೆ 40 ನಿಮಿಷ
(C) 4 ಗಂಟೆ $50\frac{4}{11}$ ನಿಮಿಷ
(D) 4 ಗಂಟೆ $54\frac{6}{11}$ ನಿಮಿಷ

**35.** A, B ಮತ್ತು C ಹೂಡಿಕೆಯನ್ನು ಒಂದು ವ್ಯಾಪಾರದಲ್ಲಿ ಮಾಡುತ್ತಾರೆ. A ಹೂಡಿಕೆ ರೂ. 5,000 2 ತಿಂಗಳುಗಳಿಗೆ, B ಹೂಡಿಕೆ ರೂ. 6,000 3 ತಿಂಗಳುಗಳಿಗೆ ಮತ್ತು C ಹೂಡಿಕೆ ರೂ. 4,000 5 ತಿಂಗಳುಗಳಿಗೆ. ಲಾಭದ ರೂ. 960ಗಳಲ್ಲಿ 'A'ನ ಪಾಲು ಕೆಳಗಿನವುಗಳಲ್ಲಿ

(A) ರೂ. 360 (B) ರೂ. 200
(C) ರೂ. 400 (D) ರೂ. 500

**36.** A, B ಮತ್ತು C ಅವರ ಸಂಬಳ 2 : 3 : 5ರ ಅನುಪಾತದಲ್ಲಿದೆ. ಕ್ರಮವಾಗಿ 15%, 10% ಮತ್ತು 20% ಏರಿಕೆಯನ್ನು ಸಂಬಳದಲ್ಲಿ ಮಾಡಿದರೆ, ನಂತರದ ಹೊಸ ಅನುಪಾತ ಅವರ ವೇತನಗಳಲ್ಲಿ ಎಷ್ಟು ?

(A) 3 : 3 : 10
(B) 10 : 11 : 20
(C) 23 : 33 : 60
(D) 15 : 10 : 20

**37.** ವಾತಾವರಣದಲ್ಲಿರುವ ತೇವಾಂಶವು

(A) ಹವೆಯ ಉಷ್ಣತೆಯನ್ನು ಹೆಚ್ಚಿಸುತ್ತದೆ
(B) ಹವೆಯ ಉಷ್ಣತೆಯನ್ನು ಕುಗ್ಗಿಸುತ್ತದೆ
(C) ಹವೆಯ ಉಷ್ಣತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ
(D) ಹವೆಯ ಉಷ್ಣತೆಯನ್ನು ಕಾಪಾಡಿಕೊಳ್ಳುತ್ತದೆ

**38.** 'ಅಣೆಕಟ್ಟುಗಳು ಅಭಿವೃದ್ಧಿಯ ಯಾತ್ರಾಸ್ಥಳಗಳು' – ಹೀಗೆಂದವರು ಯಾರು ?

(A) ಮಹಾತ್ಮಾ ಗಾಂಧಿ
(B) ರಾಜೀವ್ ಗಾಂಧಿ
(C) ಜೆಆರ್‌ಡಿ ಟಾಟಾ
(D) ಜವಾಹರಲಾಲ್ ನೆಹರೂ

**39.** ಈ ಕೆಳಗಿನ ಯಾವ ಹೇಳಿಕೆ ಸುಳ್ಳೆಂದು ಗುರುತಿಸಿ.

(A) ಆಧುನಿಕ ಕೃಷಿ ತಲಾ ಆಹಾರ ಉತ್ಪಾದನೆಯನ್ನು ಹೆಚ್ಚಿಸಿತು
(B) ಆಧುನಿಕ ಕೃಷಿ ಮಣ್ಣಿನ ಶಕ್ತಿಯನ್ನು ಕುಗ್ಗಿಸುತ್ತದೆ
(C) ಆಧುನಿಕ ಕೃಷಿ ಮಾಲಿನ್ಯವನ್ನು ಹಿಡಿತದಲ್ಲಿಡುತ್ತದೆ
(D) ಆಧುನಿಕ ಕೃಷಿ ಜೀವ ವೈವಿಧ್ಯವನ್ನು ಕಾಪಾಡುತ್ತದೆ

**31.** If 9 men and 12 boys can do a piece of work in 4 days and 4 men and 16 boys can do the same piece of work in 6 days, how long will 6 men and 24 boys take to complete the same work ?

(A) 3 days (B) 4 days

(C) 5 days (D) 6 days

**32.** Find the fifth term in the following series : 2, 7, 27, 107, ?

(A) 227 (B) 327

(C) 427 (D) 527

**33.** In a code HOUSE is written as INVRF, how is CROWD written in that code ?

(A) DQPVE (B) DQPVK

(C) DQVPE (D) DQEPV

**34.** At what time between 4 and 5 O'clock will the hands of a clock be in opposite directions ?

(A) 45 minutes past 4

(B) 40 minutes past 4

(C) $50\frac{4}{11}$ minutes past 4

(D) $54\frac{6}{11}$ minutes past 4

**35.** A, B and C invested in a common business. A invested Rs. 5,000 for 2 months, B invested Rs. 6,000 for 3 months and C invested Rs. 4,000 for 5 months. Out of a profit of Rs. 960, 'A's share is

(A) Rs. 360 (B) Rs. 200

(C) Rs. 400 (D) Rs. 500

**36.** The salaries of A, B, C are in the ratio 2 : 3 : 5. If the increment of 15%, 10% and 20% are allowed respectively in their salaries, then what will be the new ratio of their salaries ?

(A) 3 : 3 : 10

(B) 10 : 11 : 20

(C) 23 : 33 : 60

(D) 15 : 10 : 20

**37.** Humidity in the air

(A) Increases air temperature

(B) Decreases air temperature

(C) Has no effect on air temperature

(D) Maintains air temperature

**38.** Who described dams as 'pilgrim centres of development' ?

(A) Mahatma Gandhi

(B) Rajiv Gandhi

(C) JRD Tata

(D) Jawaharlal Nehru

**39.** State which of the following is false.

(A) Modern agriculture increased percapita food production

(B) Modern agriculture makes soil infertile

(C) Modern agriculture controls pollution

(D) Modern agriculture protects biodiversity

**40.** ಹೊಂದಿಸಿ ಬರೆಯಿರಿ :

| ಲಿಸ್ಟ್ – I | ಲಿಸ್ಟ್ – II |
|---|---|
| 1. ಸೈಲೆಂಟ್ ವ್ಯಾಲಿ | a. ಕರ್ನಾಟಕ |
| 2. ಅಪ್ಪಿಕೋ | b. ಮಧ್ಯಪ್ರದೇಶ |
| 3. ಚಿಪ್ಕೊ | c. ಕೇರಳ |
| 4. ಸರ್ದಾರ್ ಸರೋವರ | d. ಉತ್ತರಪ್ರದೇಶ |

**ಸಂಕೇತಗಳು :**

(A) 1 – c, 2 – a, 3 – d, 4 – b

(B) 1 – d, 2 – c, 3 – a, 4 – b

(C) 1 – a, 2 – d, 3 – b, 4 – c

(D) 1 – b, 2 – c, 3 – d, 4 – a

**41.** 'ಇಕೋಸಿಸ್ಟಂ' ಎಂಬ ಪದವನ್ನು ಹುಟ್ಟು ಹಾಕಿದ್ದು

(A) ಐನ್‌ಸ್ಟೀನ್

(B) ವಾಗ್ನೇಲ್ಸ್

(C) ಮೆಕ್ ನಾಟನ್

(D) ಎ. ಜಿ. ಟಾನ್ಸ್‌ಲೇ

**42.** ಭಾರತದಲ್ಲಿ ಸಮಗ್ರ ವನ್ಯಜೀವಿ ರಕ್ಷಣಾ ಕಾಯಿದೆ ಜಾರಿಗೆ ಬಂದ ವರ್ಷ

(A) 1979 (B) 1975

(C) 1972 (D) 1973

**43.** ಕಲಿಕೆಯ ಚಲನಾತ್ಮಕ ವಿಧಾನ ಎನ್ನುವುದು ಯಾವುದಕ್ಕೆಂದರೆ,

(A) ಶಿಕ್ಷಕರು ಚಲನಾತ್ಮಕವಾಗಿ ಹಾಗೂ ಚೈತನ್ಯಶಾಲಿಗಳಾಗಿರುವುದಕ್ಕೆ

(B) ವಿದ್ಯಾರ್ಥಿಗಳು ಚಟುವಟಿಕೆಗಳ ಮೂಲಕ ಕಲಿಯುವ ಅಗತ್ಯತೆ ಇರುವುದಕ್ಕೆ

(C) ಹೊಸತನಕ್ಕಾಗಿ ಪಠ್ಯವನ್ನು ಆಗಾಗ್ಗೆ ಬದಲಾಯಿಸುವುದಕ್ಕೆ

(D) ಬೋಧನೆಯನ್ನು ಪರಿಣಾಮಕಾರಿಯನ್ನಾಗಿಸುವುದಕ್ಕೆ

**44.** ತನ್ನ ಕಲಿಕೆಯ ಅರ್ಥ ಮತ್ತು ಸಮರ್ಥನೆಗಳನ್ನು ಕಾಣಲು ಬಯಸುವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಯನ್ನು ಹೀಗೆನ್ನಬಹುದು

(A) ನವೀನತೆಯನ್ನು ಆವಿಷ್ಕರಿಸುವ ಕಲಿಕಾರ್ಥಿ

(B) ಸಾಮಾನ್ಯ ಜ್ಞಾನದ ಕಲಿಕಾರ್ಥಿ

(C) ಚಲನಾತ್ಮಕ ಕಲಿಕಾರ್ಥಿ

(D) ವಿಶ್ಲೇಷಣಶೀಲ ಕಲಿಕಾರ್ಥಿ

**45.** ಕೆಳಗಿನವುಗಳಲ್ಲಿ ಯಾವ ಆಚರಣೆಯನ್ನು ನೈದಾನಿಕ ಮೌಲ್ಯಮಾಪನ ಎನ್ನಬಹುದು ?

(A) ಶಿಕ್ಷಕರು ಬೋಧನೆ ಮತ್ತು ಕಲಿಕೆಗಳ ಪ್ರಕ್ರಿಯೆಯ ಪ್ರಾರಂಭದಲ್ಲಿ ಮಾಡುವ ಮೌಲ್ಯಮಾಪನವನ್ನು

(B) ಶಿಕ್ಷಕರು ಬೋಧನೆ ಮತ್ತು ಕಲಿಕೆಗಳ ಪ್ರಕ್ರಿಯೆಯ ಕೊನೆಯಲ್ಲಿ ಮಾಡುವ ಮೌಲ್ಯಮಾಪನವನ್ನು

(C) ಸೆಮಿಸ್ಟರ್ ಕೊನೆಯಲ್ಲಿ ಮೌಲ್ಯಮಾಪನ ಮಾಡುವುದನ್ನು

(D) ಆಂತರಿಕ ಮೌಲ್ಯನಿರ್ಧಾರಿತ ಪರೀಕ್ಷಣದ ಮೂಲಕ ಮೌಲ್ಯಮಾಪನ ಮಾಡುವುದನ್ನು

**46.** ಫಲಪ್ರಮಾಣವಾದ ಶಿಕ್ಷಣದ ತತ್ವದ ನಂಬಿಕೆ ಎಂದರೆ,

(A) ಎಲ್ಲಾ ಕಲಿಕೆಯೂ ಸಂಪೂರ್ಣವಾಗಿ ಶಿಕ್ಷಕರನ್ನು ಅವಲಂಬಿಸಿರುತ್ತದೆ

(B) ಕಲಿಕೆಯು ಸಂಪೂರ್ಣವಾಗಿ ವಿದ್ಯಾರ್ಥಿಗಳ ಹೊಣೆಯಾಗಿರುತ್ತದೆ

(C) ಎಲ್ಲಾ ರೀತಿಯ ಕಲಿಕೆಯು ಸ್ಥಳ, ಸಮಯ ಮತ್ತು ಸಂದರ್ಭಗಳ ಸನ್ನಿವೇಶವನ್ನು ಅವಲಂಬಿಸಿರುತ್ತದೆ

(D) ಕಲಿಕೆಯು ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನ ಅನ್ಯೋನ್ಯ ಪ್ರಕ್ರಿಯೆಯಾಗಿರುತ್ತದೆ

**47.** 'ನಡುವೆ ಸಂಭವಿಸುವ (ಇಂಟರ್‌ವೀನಿಂಗ್) ಚಲಕ' ಎಂಬುದಕ್ಕೆ ಕೆಳಗಿನವುಗಳಲ್ಲಿ ಯಾವುದು ಉದಾಹರಣೆಯಾಗಿದೆ ?

(A) ಒಂದು ಬೋಧನಾ ಸಾಮಗ್ರಿ

(B) ಶಿಕ್ಷಕ

(C) ವಿದ್ಯಾರ್ಥಿ

(D) ಆಡಳಿತ

**40.** Match the following :

| | List – I | | List – II |
|---|---|---|---|
| 1. | Silent Valley | a. | Karnataka |
| 2. | Appiko | b. | Madhya Pradesh |
| 3. | Chipko | c. | Kerala |
| 4. | Sardar Sarovar | d. | Uttar Pradesh |

**Codes :**

(A) 1 – c, 2 – a, 3 – d, 4 – b

(B) 1 – d, 2 – c, 3 – a, 4 – b

(C) 1 – a, 2 – d, 3 – b, 4 – c

(D) 1 – b, 2 – c, 3 – d, 4 – a

**41.** The word 'Ecosystem' was coined by

(A) Einstein

(B) Wagnales

(C) Mc Nanghton

(D) A. G. Tansley

**42.** The Comprehensive Wild Life Protection Act in India came into being in the year

(A) 1979 (B) 1975

(C) 1972 (D) 1973

**43.** A dynamic approach to learning implies

(A) Teachers should be dynamic and energetic

(B) The students should be required to learn through activities

(C) The topics should be constantly changed for novelty

(D) Teaching should be effective

**44.** A student who seeks meaning and reasoning for what s/he learns can be classified as

(A) Innovative learner

(B) Commonsense learner

(C) Dynamic learner

(D) Analytic learner

**45.** Which of the following practice belongs to the method of Diagnostic Evaluation ?

(A) The teacher conducts evaluation in the beginning of teaching-learning process

(B) The teacher conducts evaluation at the end of the teaching-learning process

(C) An end-semester examination

(D) An internal assessment test

**46.** A pragmatic educational philosophy would believe that

(A) All learning is entirely dependent on the teacher

(B) Learning is the sole responsibility of the student

(C) All learning is dependent on the context of place, time and circumstances

(D) Learning is an interactive process between the teacher and the student

**47.** Which of the following is an example of 'Intervening variable' ?

(A) An instructional material

(B) Teacher

(C) Student

(D) Administration

**48.** ಕೆಳಗಿನ ಯಾವುದು ಸೂಕ್ಷ್ಮ ಅಣು ಬೋಧನೆಗೆ ಅನ್ವಯವಾಗುವುದಿಲ್ಲ?

(A) ಶಿಕ್ಷಣದ ಕೌಶಲವನ್ನು ವೃದ್ಧಿ ಪಡಿಸುವುದರಲ್ಲಿ ಕೇಂದ್ರಿತವಾಗಿರುವುದು

(B) ತರಬೇತಿಗೊಳ್ಳುವವರ ಕಾರ್ಯನಿರ್ವಹಣೆಯ ಪುನರ್ನಿವಿಷ್ಟ

(C) ಮಿತವಾದ ವಿದ್ಯಾರ್ಥಿಗಳ ಸಂಖ್ಯೆ

(D) ಬಹುದೊಡ್ಡದಾದ ಮತ್ತು ವಿಶಾಲವಾದ ವಿಷಯ

**49.** ಯಾವುದಾದರೂ ವ್ಯಕ್ತಿ ತನ್ನನ್ನು ಸುಳ್ಳಾಗಿ ನೌಕಾಧಿಕಾರಿಯೆಂದು ಬಿಂಬಿಸಿಕೊಳ್ಳಲು ನೌಕಾಧಿಕಾರಿಯ ಸಮವಸ್ತ್ರ ದುರುಪಯೋಗ ಪಡಿಸಿಕೊಂಡರೆ ಅವನು ಅಥವಾ ಅವಳು ಯಾವ ಕಾಯಿದೆಯಡಿ ತಪ್ಪಿತಸ್ಥರು ?

(A) ಪೋಲಿಸ್ (ಇನ್‌ಸೈಟ್‌ಮೆಂಟ್ ಟು ಡಿಸಫೆಕ್ಷನ್) ಕಾಯಿದೆ, 1922

(B) ಅಧಿಕೃತ ರಹಸ್ಯ ಕಾಯಿದೆ, 1923

(C) ನಾಗರಿಕ ಹಕ್ಕುಗಳ ರಕ್ಷಣಾ ಕಾಯಿದೆ, 1955

(D) ಅನಧಿಕೃತ ಚಟುವಟಿಕೆ ತಡೆ ಕಾಯಿದೆ, 1967

**50.** ಕಾರ್ಯನಿರತ ಪತ್ರಕರ್ತರ ಕಾಯಿದೆ ಭಾಗ 3(2)ರ ಪ್ರಕಾರ ಒಬ್ಬ ಸಂಪಾದಕನನ್ನು ಸೇವೆಯಿಂದ ವಜಾಗೊಳಿಸಲು ನೀಡಬೇಕಾದ ನೋಟೀಸಿನ ಅವಧಿ

(A) ಆರು ತಿಂಗಳುಗಳು (B) ಮೂರು ತಿಂಗಳುಗಳು

(C) ಎರಡು ತಿಂಗಳುಗಳು (D) ಎಂಟು ತಿಂಗಳುಗಳು

**51.** ಭಾರತದ ಅಧಿಕೃತ ಸಾರ್ವಜನಿಕ ಪ್ರಸಾರಕರನ್ನು ಹೆಸರಿಸಿ.

(A) ದೂರದರ್ಶನ

(B) ಆಲ್ ಇಂಡಿಯಾ ರೇಡಿಯೋ

(C) ಪ್ರಸಾರ ಭಾರತಿ ಕಾರ್ಪೊರೇಶನ್

(D) ವಾರ್ತಾ ಮತ್ತು ಪ್ರಸಾರ ಸಚಿವಾಲಯ

**52.** ಭಾರತೀಯ ಪತ್ರಿಕಾ ಮಂಡಳಿಯಲ್ಲಿರುವುದು

(A) ಅಧ್ಯಕ್ಷರು ಮತ್ತು 27 ಜನ ಇತರ ಸದಸ್ಯರು

(B) ಅಧ್ಯಕ್ಷರ ಹೊರತಾಗಿ 28 ಜನ ಸದಸ್ಯರು

(C) ಅಧ್ಯಕ್ಷರು ಮತ್ತು 29 ಜನ ಇತರ ಸದಸ್ಯರು

(D) ಅಧ್ಯಕ್ಷರು ಮತ್ತು 28 ಜನ ಇತರ ಸದಸ್ಯರು

**53.** ಐಪಿಸಿ 124ಎ, ಅಡಿಯಲ್ಲಿ ಯಾವುದೇ ವ್ಯಕ್ತಿ ಭಾರತದಲ್ಲಿ ಸಂವಿಧಾನದ ಅನುಸಾರ ರಚನೆಗೊಂಡ ಸರ್ಕಾರದ ವಿರುದ್ಧ ದ್ವೇಷ ಹುಟ್ಟುವಂತೆ ಬರೆದರೆ ಅಥವಾ ಮಾತನಾಡಿದರೆ ಅದು ಯಾವ ಕಾಯಿದೆಯಡಿ ಅಪರಾಧ ?

(A) ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

(B) ಶಾಸನಸಭಾ ನಿಂದನೆ

(C) ದೇಶದ್ರೋಹ

(D) ಮಾನಹಾನಿ

**54.** ಭಾರತದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಮಾನಹಾನಿ ಮಾಡಿದರೆ ನೀಡಬಹುದಾದ ಶಿಕ್ಷೆಯೆಂದರೆ

(A) ನಾಲ್ಕು ವರ್ಷಗಳ ಸರಳ ಸೆರೆಮನೆವಾಸ

(B) ನ್ಯಾಯಾಲಯ ವಿಧಿಸುವ ದಂಡ, ಆದರೆ ಸೆರೆಮನೆವಾಸವಿಲ್ಲ

(C) ಮೂರು ವರ್ಷಗಳ ಸರಳ ಸೆರೆಮನೆವಾಸ

(D) ಎರಡು ವರ್ಷಗಳ ಸರಳ ಸೆರೆಮನೆವಾಸ ಅಥವಾ ದಂಡ ಅಥವಾ ಎರಡೂ

**55.** ಈ ಕೆಳಗೆ ಎರಡು ಹೇಳಿಕೆಗಳು (a) ಮತ್ತು (b) ಯನ್ನು ಕೊಡಲಾಗಿದೆ ನಂತರ ಅವುಗಳ ನಿರ್ಧಾರಗಳನ್ನು (i) ಮತ್ತು (ii) ನೀಡಲಾಗಿದೆ. ಹೇಳಿಕೆಗಳನ್ನು ನೀವು ಸರಿ ಎಂದೇ ಪರಿಗಣಿಸಬೇಕು. ಯಾವ ನಿರ್ಧಾರಗಳು ಹೇಳಿಕೆಗನುಗುಣವಾಗಿ ತರ್ಕಬದ್ಧವಾಗಿವೆ ?

**ಹೇಳಿಕೆಗಳು :**

(a) ಕೆಲವು ಸಂಗೀತಕಾರರು ಗಾಯಕರು.

(b) ಎಲ್ಲಾ ಗಾಯಕರು ನೃತ್ಯಗಾರರು.

**ನಿರ್ಧಾರಗಳು :**

(i) ಕೆಲವು ಸಂಗೀತಕಾರರು ನೃತ್ಯಗಾರರು.

(ii) ಯಾವುದೇ ಗಾಯಕ ಸಂಗೀತಗಾರನಲ್ಲ.

(A) ಕೇವಲ ನಿರ್ಧಾರ (i) ಸರಿ

(B) ಕೇವಲ ನಿರ್ಧಾರ (ii) ಸರಿ

(C) ಎರಡರಲ್ಲಿ ನಿರ್ಧಾರ (i) ಅಥವಾ (ii) ಅನುಸರಿಸುವುದು

(D) ನಿರ್ಧಾರ (i) ಅಥವಾ ನಿರ್ಧಾರ (ii) ಎರಡೂ ಅನುಸರಿಸುವುದಿಲ್ಲ

**48.** Which of the following does not apply to Micro-teaching ?

(A) Focus on developing teaching skills

(B) Feedback for trainee's performance

(C) Limited number of students

(D) A very wide and large topic

**49.** If any person uses official uniforms of naval authorities to falsely represent himself to be a naval officer, he or she shall be guilty of an offence under

(A) Police (Incitement to Disaffection) Act, 1922

(B) Official Secrets Act, 1923

(C) Protection of Civil Rights Act, 1955

(D) Unlawful Activities Prevention Act, 1967

**50.** An editor, according to Section 3(2) of the Working Journalists Act, (an editor) may be retrenched from service with a notice period of

(A) 6 months (B) 3 months

(C) 2 months (D) 8 months

**51.** Name the official public broadcaster of the country.

(A) Doordarshan

(B) All India Radio

(C) Prasar Bharathi Corporation

(D) Ministry of Information and Broadcasting

**52.** Indian Press Council consists of

(A) Chairman and 27 other members

(B) 28 members excluding chairman

(C) Chairman and 29 other members

(D) Chairman and 28 other members

**53.** Under IPC 124A, whoever by words either spoken or written brings hatred towards a government established by law in India is an offender under

(A) Freedom of speech and expression

(B) Contempt of legislature

(C) Sedition

(D) Defamation

**54.** In India who ever defames another person shall be punishable with

(A) A simple imprisonment for 4 years

(B) A fine imposed by the court with no imprisonment

(C) A simple imprisonment for 3 years

(D) A simple imprisonment for 2 years or with fine or with both

**55.** Two statements (a) and (b) given below are followed by two conclusions (i) and (ii). You have to consider the statements are true. Which of the given conclusions logically follows from the given statements ?

**Statements :**

(a) Some musicians are singers.

(b) All the singers are dancers.

**Conclusions :**

(i) Some musicians are dancers.

(ii) No singer is musician.

(A) Only conclusion (i) follows

(B) Only conclusion (ii) follows

(C) Either conclusion (i) or (ii) follows

(D) Neither conclusion (i) nor (ii) follows

**56.** ಈ ಕೆಳಗಿನ ಪ್ರಶ್ನೆಯಲ್ಲಿ ಒಂದು ಹೇಳಿಕೆಗೆ ಎರಡು ನಿರ್ಧಾರಗಳನ್ನು (I) ಮತ್ತು (II) ನೀಡಲಾಗಿದೆ. ನೀವು ಕೊಟ್ಟಿರುವ ಹೇಳಿಕೆಯು ಸರಿ ಎಂದು ಊಹಿಸಿ, ಮತ್ತೆ ಎರಡು ನಿರ್ಧಾರಗಳನ್ನು ತಾರ್ಕಿಕವಾಗಿ ಒಂದು ಅನುಮಾನದಾಚೆ ಅನುಸರಿಸುತ್ತದೆ ಎಂದು ನಿರ್ಧರಿಸಿ.

**ಹೇಳಿಕೆ** : ಭಾರತ ಸರ್ಕಾರವು ಸ್ಮಾರ್ಟ್ ನಗರಗಳ ಯೋಜನೆಗೆ ರೂ. 100 ಕೋಟಿ ಪ್ರತಿ ವರ್ಷ 5 ವರ್ಷಗಳ ಕಾಲ ನಿಯೋಜಿಸಲು ನಿರ್ಧರಿಸಿದೆ.

**ನಿರ್ಧಾರಗಳು :**

(I) ರೂ. 500 ಕೋಟಿಯು ಸ್ಮಾರ್ಟ್ ನಗರಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸಲು ಸಾಕಾಗುವುದಿಲ್ಲ.

(II) ರೂ. 500 ಕೋಟಿಯು ಸ್ಮಾರ್ಟ್ ನಗರಗಳನ್ನು ಭಾರತದಲ್ಲಿ ಅಭಿವೃದ್ಧಿಪಡಿಸಲು ಸಾಕಾಗುವುದು.

(A) ಕೇವಲ ನಿರ್ಧಾರ (I) ಸರಿ

(B) ಕೇವಲ ನಿರ್ಧಾರ (II) ಸರಿ

(C) ಎರಡರಲ್ಲಿ ನಿರ್ಧಾರ (I) ಅಥವಾ (II) ಅನುಸರಿಸುವುದು

(D) ನಿರ್ಧಾರ (I) ಅಥವಾ (II) ಎರಡೂ ಅನುಸರಿಸುವುದಿಲ್ಲ

**57.** ಈ ಕೆಳಗಿನ ಪ್ರಶ್ನೆಯಲ್ಲಿ, ಎರಡು ವಾದಗಳನ್ನು (I) ಮತ್ತು (II) ನ್ನು ಕೊಡಲಾಗಿದೆ. ಯಾವ ವಾದ ''ಪ್ರಬಲವಾಗಿದೆ'' ಮತ್ತು ಯಾವ ವಾದ ''ದುರ್ಬಲವಾಗಿದೆ '' ಎಂದು ನಿರ್ಧರಿಸಿ ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.

**ಹೇಳಿಕೆ** : ಭಾರತದಲ್ಲಿ ಎಲ್ಲಾ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಖಾಸಗಿ ವಲಯಕ್ಕೆ ನೀಡಬೇಕೆ ?

**ವಾದಗಳು :**

(I) ಇಲ್ಲ; ಖಾಸಗಿ ವಲಯದ ಘಟಕಗಳು ಇಂತಹ ಯೋಜನೆಗಳನ್ನು ಕಾರ್ಯಗತಗೊಳಿಸಲು ಅವಶ್ಯಕ ಸ್ವತ್ತುಗಳನ್ನು ಹೊಂದಿಲ್ಲ.

(II) ಹೌದು; ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಇಂತಹ ಯೋಜನೆಗಳನ್ನು ಖಾಸಗಿ ವಲಯಗಳು ಕಾರ್ಯಗತಗೊಳಿಸಬಹುದು.

(A) ಕೇವಲ ವಾದ (I) ಪ್ರಬಲವಾಗಿದೆ

(B) ಕೇವಲ ವಾದ (II) ಪ್ರಬಲವಾಗಿದೆ

(C) ಎರಡರಲ್ಲಿ ವಾದ (I) ಅಥವಾ (II) ಪ್ರಬಲವಾಗಿದೆ

(D) ವಾದ (I) ಅಥವಾ (II) ಎರಡೂ ಪ್ರಬಲವಾಗಿಲ್ಲ

**58.** ಒಂದು ವೇಳೆ ಹೇಳಿಕೆ ''ಎಲ್ಲಾ ವಿದ್ಯಾರ್ಥಿಗಳು ಬುದ್ಧಿವಂತರು'' ನಿಜವಾದಲ್ಲಿ , ಈ ಕೆಳಗಿನ ಯಾವ ಹೇಳಿಕೆಯು ಸುಳ್ಳು ಎಂದು ತಿಳಿಸಿ.

(i) ಯಾವುದೇ ವಿದ್ಯಾರ್ಥಿಯು ಬುದ್ಧಿವಂತನಲ್ಲ.

(ii) ಕೆಲವು ವಿದ್ಯಾರ್ಥಿಗಳು ಬುದ್ಧಿವಂತರು.

(iii) ಕೆಲವು ವಿದ್ಯಾರ್ಥಿಗಳು ಬುದ್ಧಿವಂತರಲ್ಲ.

(A) (i) ಮತ್ತು (ii) (B) (i) ಮತ್ತು (iii)

(C) (ii) ಮತ್ತು (iii) (D) (i) ಮಾತ್ರ

**59.** ಮೇಲ್ತುದಿಯಲ್ಲಿ ಕೊಟ್ಟ ಜೋಡಿ ಪದಗಳಿಗಿರುವ ಸಂಬಂಧವನ್ನೇ ಹೊಂದಿದ ಪದಗಳ ಜೋಡಿಯನ್ನು ಆರಿಸಿ.

ನಾಯಕ : ಪಾತ್ರ

(A) ಮನುಷ್ಯ : ವಲಸಿಗ

(B) ಪಕ್ಷಿ : ವಲಸೆ

(C) ಆಹಾರ : ಕಲಬೆರಕೆ

(D) ಕಪ್ಪೆ : ಇಸ್ಪೀಟ್ವೆಲ್

**60.** ಆರು ಜನ ಸ್ನೇಹಿತರು A, B, C, D, E ಮತ್ತು F ಇದ್ದರು. ಎಲ್ಲರು ಕೆಳಗಿನ ಒಂದು ಆಟದಲ್ಲಿ ಪರಿಣಿತರು. ಬೇಸ್ಬಾಲ್, ವಾಲಿಬಾಲ್, ಕೇರಂ, ಹಾಕಿ, ಟಿಟಿ ಮತ್ತು ಪೋಲೋ. ಪ್ರತಿಯೊಬ್ಬರು ಒಂದು ಕಾರಿನ ಮಾಲೀಕರು ಮತ್ತು ಬಣ್ಣ ಬೇರೆ ಬೇರೆಯಾಗಿತ್ತು – ಹಳದಿ, ಹಸಿರು, ಕಪ್ಪು , ಬಿಳಿ, ನೀಲಿ ಮತ್ತು ಕೆಂಪು. D ಪೋಲೋ ಆಡುತ್ತಾನೆ ಮತ್ತು ಹಳದಿ ಬಣ್ಣದ ಕಾರಿನ ಮಾಲೀಕ. C ಹಾಕಿ ಮತ್ತು ಟಿಟಿ ಆಡುವುದಿಲ್ಲ ಮತ್ತು ನೀಲಿ ಅಥವಾ ಹಳದಿ ಕಾರಿನ ಮಾಲೀಕನಲ್ಲ. E ಹತ್ತಿರ ಬಿಳಿ ಕಾರಿದೆ ಮತ್ತು ಬೇಸ್ಬಾಲ್ ಆಡುತ್ತಾನೆ. B ಟಿಟಿ ಆಡುವುದಿಲ್ಲ ಮತ್ತು ಕೆಂಪು ಕಾರಿನ ಮಾಲೀಕ. A ಕೇರಂ ಆಡುತ್ತಾನೆ ಮತ್ತು ಕಪ್ಪು ಕಾರಿನ ಮಾಲೀಕ. ಈ ವಿಷಯವನ್ನು ಅರಿತು ಕೆಳಗಿನ ಪ್ರಶ್ನೆಯನ್ನು ಉತ್ತರಿಸಿ.

F ಯಾವ ಬಣ್ಣದ ಕಾರು ಹೊಂದಿದ್ದಾನೆ ಮತ್ತು ಯಾವ ಆಟ ಆಡುತ್ತಾನೆ ?

(A) ಕೆಂಪು ಮತ್ತು ಹಾಕಿ

(B) ಹಳದಿ ಮತ್ತು ಪೋಲೋ

(C) ನೀಲಿ ಮತ್ತು ಟಿಟಿ

(D) ಕಪ್ಪು ಮತ್ತು ಟಿಟಿ

**56.** In the following question a statement is followed by two conclusions numbered (I) and (II). You have to assume everything in the statement to be true, then consider the two conclusion and decide which of them logically follows beyond a reasonable doubt.

**Statement** : The Government of India has decided to allocate Rs. 100 crores each year for 5 years for developing smart cities project.

**Conclusion :**

(I) Rs. 500 crores is not sufficient for developing smart cities project in India.

(II) Rs. 500 crores is adequate for developing smart cities project in India.

(A) If only conclusion (I) follows

(B) If only conclusion (II) follows

(C) If either conclusion (I) or (II) follows

(D) If neither conclusion (I) nor (II) follows

**57.** The question below is followed by two arguments (I) and (II). Decide which of the arguments is "strong" and which is "weak". Choose the correct answer from the given below.

**Statement** : Should all the infrastructure development projects in India be given to the private sector ?

**Arguments :**

(I) No, private sector units are not equipped with the necessary assets to execute such projects

(II) Yes, in a developing country such projects could be executed by the private sector.

(A) Only the argument (I) is strong

(B) Only the argument (II) is strong

(C) If either argument (I) or (II) is strong

(D) If neither argument (I) nor (II) is strong

**58.** If the statement "all students are intelligent" is true, which of the following statements are false ?

(i) No students are intelligent.

(ii) Some students are intelligent.

(iii) Some students are not intelligent.

(A) (i) and (ii) (B) (i) and (iii)

(C) (ii) and (iii) (D) (i) only

**59.** Choose the pair of words which shows the same relationship as given at the top.

Protagonist : Character

(A) Man : Immigration

(B) Bird : Migration

(C) Food : Adulteration

(D) Frog : Aestival

**60.** There were 6 friends A, B, C, D, E and F. Everyone is good in one of the following games : Baseball, Volleyball, Carom, Hockey, TT and Polo. Each owns a different coloured car-yellow, green, black, white, blue and red. D plays polo and has yellow car. C does not play TT and Hockey and owns neither blue nor yellow car. E has white car and plays Baseball. B doesn't play TT, he has red car. A plays carom and has black car. Based on this information answer the following question :

Which coloured car F owns and which game F plays ?

(A) Red and Hockey

(B) Yellow and Polo

(C) Blue and TT

(D) Black and TT

ಚಿತ್ತು ಬರಹಕ್ಕಾಗಿ ಸ್ಥಳ

Space for Rough Work